ಸಿಂಗ: ಯಾಕೋ ನಿಂಗ ಕೆನ್ನೆ ಊದ್ಕೊಂಡ್ಬಿಟ್ಟಿದೆ?

ನಿಂಗ: ಮೊನ್ನೆ ಬೆಳಿಗ್ಗೆ ನನ್ನ ಮಾವ ಫೋನ್ ಮಾಡಿದ್ರು. 'ಕೊರೊನಾ ಅಲ್ಲಿ ಹೇಗಿದೆ ಅಳಿಯಂದ್ರೇ' ಅಂಥ ಕೇಳಿದ್ರು.

ಸಿಂಗ: ಅದಕ್ಕೇನಾಯ್ತು?

ನಿಂಗ: ಚೆನ್ನಾಗಿದೆ ಮಾವ. ಇಲ್ಲೇ ಪಕ್ಕದಲ್ಲೇ ಮಲಗಿದೆ ಅಂಥ ಹೇಳಿದೆ ಕಣೊ ಅಷ್ಟೇ.

***

ಸಿಂಗ: ಹಲೋ ನಿಂಗಾ ಏನ್ಮಾಡ್ತಾಯಿದೀಯಾ?

ನಿಂಗ: ಎಕ್ಸ್‌ಪೆರಿಮೆಂಟ್ ಮಾಡ್ತಾಯಿದಿನಿ ಕಣೋ.

ಸಿಂಗ: ಕೊರೊನಾ ಟೈಮಿನಲ್ಲಿ ಈಗ್ಯಾವ ಎಕ್ಸ್‌ಪೆರಿಮೆಂಟ್ ಮಾಡ್ತಾಯಿದಿಯಾ? ಅದೂ ಮನೇಲಿ.

ನಿಂಗ: ವಾಟರ್ ಸಾಲಿಬಲ್ ಸಲುಷನ್ ವಿತ್ ಹರ್ ಕ್ಲಾತ್ ಇನ್ ವೆಟ್ ಅಂಡ್ ಡ್ರೈಯ್ ಕಂಡಿಷನ್

ಸಿಂಗ: ಓಹೋ, ಹೆಂಡತಿ ಬಟ್ಟೆ ತೊಳಿದಿಯಾ ಅಂಥ ಹೇಳೋ ನನ್ಮಗನೆ. ನಾನೂ ಈಗ ಅದನ್ನೇ ಮಾಡಿ, ಪಾತ್ರೆ ತೊಳಿತಾ ಇದ್ದೀನಿ.

***

ಸಿಂಗ: ಯಾಕೋ ನಿಂಗ ಮುಂದಿನ ಎರಡೂ ಹಲ್ಲು ಮುರಿದು ಹೋಗಿವೆ? ಎಲ್ಲಾದ್ರೂ ಬಿದ್ದಾ?



ಸಿಂಗ: ದೈಹಿಕ ಅಂತರದಿಂದ ನಾನು ಎರಡೆರಡು ಪ್ರಾಬ್ಲಂನಿಂದ ಪಾರಾಗ್ತಾಯಿದಿನೀ ನಿಂಗ.

ನಿಂಗ: ಕೊರೊನಾ ಒಂದಾದ್ರೇ, ಇನ್ನೊಂದು ಯಾವುದೋ?

ಸಿಂಗ: ನನ್ನ ಹೆಂಡತಿಯ ಏಟಿನಿಂದ ಗುರು.

ನಿಂಗ: ಇಲ್ಲ ಕಣೋ, ಲಾಕ್‌ಡೋನಿನಲ್ಲಿ ನಾನೇ ಬಟ್ಟೆ ತೊಳೀತಿದ್ದೆ. ನನ್ನ ಹೆಂಡತಿ ನೀವು ಬಟ್ಟೆ ಚೆನ್ನಾಗಿ ತೊಳೆಯುವುದಿಲ್ಲ. ಕೆಲಸದವಳು ನಿಮಗಿಂತ ಎಷ್ಟೋ ಚೆನ್ನಾಗಿ ತೊಳಿತಿದ್ಲು ಅಂದ್ಲು.

ಸಿಂಗ: ಅದಕ್ಕೇ?

ನಿಂಗ: ನಾಳೆಯಿಂದ ಅವಳನ್ನೇ ಕರೆ. ಅವಳನ್ನು ನೋಡಿ ತುಂಬಾ ದಿನ ಆಯ್ತು ಅಂಥ ಅಂದ್ಬಿಟ್ಟೇ ಕಣೋ ಅಷ್ಟೇ.

***

ಸಿಂಗ: ಕಾರ್ಪೊರೇಷನಿನಲ್ಲಿ ಸ್ವೀಪರ್ ಕೆಲಸಕ್ಕೆ ಅರ್ಜಿ ಹಾಕಬೇಕಂತ ಮಾಡಿದಿಯೇನೊ ನಿಂಗ.

ನಿಂಗ: ಯಾಕೊ? ನಿಂಗೆ ಒಳ್ಳೆಯ ಆಫೀಸಿನಲ್ಲಿ ಬಹಳಷ್ಟು ಪಗಾರ ಇರೋ ಕೆಲಸ ಇದೆಯಲ್ಲೋ?

ಸಿಂಗ: ಈ ಕೊರೊನಾ ಲಾಕ್‌ಡೋನ್‌ನಲ್ಲಿ ಆಫೀಸ್ ಕೆಲಸ ಎಲ್ಲ ಮರೆತು ತಿಕ್ಕೋದು, ಗುಡುಸೋದು ಮತ್ತು ತೊಳೆಯೋದ್ರಲ್ಲಿ ಎಕ್ಸ್‌ಪರ್ಟ್ ಆಗಿದ್ದೇನೊ ಅದಕ್ಕೆ.

***

ಸಿಂಗ: ಯಾಕೋ ನಿಂಗ ನಿನ್ನ ಮೊಬೈಲ್ ಫೋನ್ ಸ್ಕ್ರೀನ್‌ಗೆ ಇಷ್ಟೊಂದು ಸ್ಕ್ರಾಚ್‌ಗಳು ಬಿದ್ದವು?

ನಿಂಗ: ಲಾಕ್‌ಡೋನ್‌ನಲ್ಲಿ ನನ್ನ ಹೆಂಡತಿ ನನ್ನಿಂದಾ ಪಾತ್ರೆ ತೊಳಿಸ್ತಾಯಿದ್ಲು ಕಣೋ.

ಸಿಂಗ: ಅದಕ್ಕೇ?

ನಿಂಗ: ಪಾತ್ರೆ ಉಜ್ಜಿ ಉಜ್ಜಿ, ಅದೇ ಫೋರ್ಸ್‌ನಲ್ಲಿ ಮೊಬೈಲ್ ಫೋನ್ ಉಜ್ಜಿಬಿಟ್ಟೇ ಕಣೋ.

( ಸಂಗ್ರಹ) ವಿಜಯ ಕಮತೆ ಧಾರವಾಡ

ಮಂಜ: ಅಪ್ಪ, ನಮ್ಮ ಮೇಡಂಗೆ ನಾಳೆ ಕುಲ್ಫಿ ಬೇಕಂತೆ.

ನಂಜ: ಕುಲ್ಫಿ ಯಾಕೆ ಬೇಕಂತೋ (ಆಶ್ಚರ್ಯದಿಂದ) ನಾಳೆ ಯಾಕೆ ಈಗ್ಲೇ ಕೊಡ್ಸೋಣ ಬಾ. (ಸ್ಕೂಲಿಗೆ ಹೋಗಿ) ಏನ್ರಿ ಮೇಡಂ, ನಿಮಗೆ ಕುಲ್ಫಿ ತಿನ್ಬೇಕು ಅಂತ ಅನಿಸ್ತಾ ಇದೆಯಾ?

ಮೇಡಂ: ನನ್ನ ಕರ್ಮ! ನಿಮ್ಮ ಮಗನಿಗೆ 's' ಅನ್ನಕ್ಕೇ ಬರಲ್ಲ...! ನಾನು ಹೇಳಿದ್ದು **Kulffi** ಅಲ್ಲಾರಿ **school fee..**

***

ಗಂಡ ಮನೆಯಲ್ಲಿ ಕುಡಿಯುತ್ತಿದ್ದ. ಹೆಂಡತಿ ಹೇಳಿದಳು, ರೀ.. ಜಾಸ್ತಿ ಕುಡೀಬೇಡಿ ಕಿಡ್ನಿ ಫೇಲ್ ಆಗುತ್ತೆ.

ಅಲ್ಲೇ ಓದುತ್ತಾ ಕುಳಿತಿದ್ದ ಮಗ ಕೇಳಿದ ಕಡಿಮೆ ಕುಡಿದರೆ ಪಾಸ್ ಆಗುತ್ತಾ ?

***

ಅವನು ಸ್ವಾಮಿ ನನಗೆ ಡೈವರ್ಸ್ ಬೇಕು.

ಜಡ್ಜ್: ಯಾಕೆ ?

ಅವನು: ಆರು ತಿಂಗಳಿಂದ ನನ್ನ ಹೆಂಡತಿ ನನ್ನೊಡನೆ ಮಾತನಾಡುತ್ತಿಲ್ಲ.

ಜಡ್ಜ್ ಅದೃಷ್ಟವಂತ ಕಣಯ್ಯಾ ನೀನು. ಸುಮ್ಮನೆ ಹೋಗು, ಆ ತರ ಇರೋ ಹೆಂಡತಿ ಯಾರಿಗೂ ಸಿಗೋದಿಲ್ಲ!

( ಸಂಗ್ರಹ ) ವಿ. ಹೇಮಂತ ಕುಮಾರ್ ಬೆಂಗಳೂರು

ಸಿಂಗ: ನೋಡ್ತಾ ಇರು, ಒಂದು ದಿನ ನಾನು ಆ್ಯಪಲ್ ಕಂಪನಿಗಿಂತ ದೊಡ್ಡ ಕಂಪನಿ ತೆಗಿತೀನಿ.

ರಂಗ: ಅದು ಯಾವುದು?

ಸಿಂಗ್: ಅದರ ಹೆಸರು ಕಲ್ಲಂಗಡಿ ಅಂತ.

***

ಕೊರೊನಾದಿಂದ ಆಸ್ಪತ್ರೆಗೆ ದಾಖಲಾಗಿದ್ದ ಮಾಜಿ ಮಂತ್ರಿಯೊಬ್ಬ ಡಿಸ್‌ಚಾರ್ಜ್ ಆಗುವವರೆಗೆ ಕೆಲಸಕ್ಕೆ ಹೋಗುವುದಿಲ್ಲ ಎಂದು ನರ್ಸ್‌ಗಳ ಮುಷ್ಕರ ಹೂಡಲು ಚಿಂತಿಸುತ್ತಿದ್ದಾರಂತೆ. ಸುದ್ದಿ.

***

ಆಪರೇಷನ್ ಟೇಬಲ್ ಮೇಲೆ ಇದ್ದ ಹಾರವನ್ನು ನೋಡಿದ ರೋಗಿಯೊಬ್ಬ ವೈದ್ಯರನ್ನು ಕೇಳಿದ,

ರೋಗಿ ಈ ಹಾರ ಏಕೆ ಸಾರ್?

ವೈದ್ಯ ಇಂದು ಇದು ನನ್ನ ಮೊದಲ ಶಸ್ತ್ರ ಚಿಕಿತ್ಸೆ. ಇದರಲ್ಲಿ ನಾನು ಯಶಸ್ವಿಯಾದರೆ ಈ ಹಾರ ನನಗೆ. ವಿಫಲವಾದರೆ ನಿನಗೆ!

***

ಮದ್ಯಪಾನವೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಅಲ್ಲವೆಂದು ಚಿಂತಕರೊಬ್ಬರ ಮಾತು.

ಆದರೆ ನಿಮ್ಮ ಸಮಸ್ಯೆಗಳಿಗೆ ಉತ್ತರ ಸಿಗದಿದ್ದರೆ, ಮದ್ಯಪಾನ ನಿಮ್ಮ ಎಲ್ಲ ಸಮಸ್ಯೆಗಳನ್ನೂ ಮರೆಸುತ್ತದೆ ಎಂದು ಸ್ವಾಮಿ ಮಲ್ಯಾನಂದ ಭಾಷಣದಲ್ಲಿ ಹೇಳಿದರಂತೆ.

***

ಜವರ: ಬಹಳ ಬೇಜಾರಿನಿಂದ ಕುಟುಂಬ ಯೋಜನಾ ಕ್ಯಾಂಪಿಗೆ ಬಂದ.

ವೈದ್ಯ: ಎಷ್ಟು ಮಕ್ಕಳು ನಿಮಗೆ?

ಜವರ: ಇಲ್ಲ ಸಾರ್. ನನಗೆ ಮದುವೆನೇ ಆಗಿಲ್ಲ.

ವೈದ್ಯ: ಮತ್ಯಾಕೆ ನಿಮಗೆ ಆಪರೇಷನ್?.

ಜವರ: ನಮ್ಮೂರಲ್ಲಿ ಮೂರ್ನಾಲ್ಕು ವರ್ಷಗಳಿಂದ ಎಲ್ಲ ಗಂಡಸರು ಆಪರೇಷನ್ ಮಾಡಿಸಿಕೊಂಡಿದ್ದಾರೆ. ನನ್ನೊಬ್ಬನನ್ನು ಬಿಟ್ಟು. ಈಗ ಯಾರೂ ಹೆಂಡತಿ ಬಸುರಿ ಯಾದರೂ ನನ್ನ ಹುಡುಕಿಕೊಂಡು ಬಂದು ಹೊಡಿತಾರೆ.

***

ಒಬ್ಬ ಮೋಟಾರ್ ಬೈಸಿಕಲ್ ಓಡಿಸುತ್ತಿದ್ದ ವ್ಯಕ್ತಿ ಸಿಗ್ನಲ್ ಜಂಪ್ ಮಾಡಿ ಗಾಡಿ ಓಡಿಸಿದ. ಇದರ ಲಾಭ ಪಡೆಯಲು ಉಳಿದ ಐದು ಬೈಕ್ ಸವಾರರು ಸಿಗ್ನಲ್ ಜಂಪ್ ಮಾಡಿದರು. ಇನ್ನೊಂದು ಬದಿಯಲ್ಲಿ ನಿಂತಿದ್ದ ಪೊಲೀಸ್ ಮೊದಲು ಸಿಗ್ನಲ್ ಜಂಪ್ ಮಾಡಿದವನನ್ನು ಬಿಟ್ಟು, ಉಳಿದ ಐವರು ಸವಾರರನ್ನು ಹಿಡಿದು ದಂಡ ಹಾಕಿದ.

ಸಿಟ್ಟಿಗೆದ್ದ ಸವಾರನೊಬ್ಬ, ಮೊದಲು ಸಿಗ್ನಲ್ ಜಂಪ್ ಮಾಡಿದವನನ್ನು ಬಿಟ್ಟು, ನಮಗೆಲ್ಲಾ ದಂಡ ಹಾಕುತ್ತಿದ್ದೀರಲ್ಲ, ಇದ್ಯಾವ ನ್ಯಾಯ?

ಪೊಲೀಸ್ ಅವನು ನಮ್ಮ ಮಾರ್ಕೆಟ್ ಮಾಡುವ ವ್ಯಕ್ತಿ. ಅವನು ಕೆಲಸವೇ ಸಿಗ್ನಲ್ ಜಂಪ್ ಮಾಡುವುದು ಮತ್ತು ಇತರ ಸವಾರರನ್ನು ಸಿಗ್ನಲ್ ಜಂಪ್ ಮಾಡುವಂತೆ ಪ್ರಚೋದಿಸುವುದು.

***

ರಾಜಕಾರಣಿಗಳಿಗೆ ಕೊರೊನಾ ಬಂದರೆ, ಮಣಿಪಾಲ್.

ಜನ ಸಾಮಾನ್ಯರಿಗೆ ಬಂದರೆ ಮಣ್ಣು ಪಾಲು ಎಂದು ಹರಟೆಕಟ್ಟೆಯಲ್ಲಿ ತಿಪ್ಪೇಸಿ ಹೇಳುತ್ತಿದ್ದ.

(ಸಂಗ್ರಹ) ಸಿಪಿ ಮೊಗೆ ರಮೇಶ್, ಮೈಸೂರು